ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED
Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – DECEMBER 2024

## KANNADA – I SEMESTER BA

## 24UBA11K – ಕಲಾ ಕನ್ನಡ 1

**Time: 3 Hours** **Max. Marks: 80**

**I. ಕೆಳಗಿನ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (200 ಪದಗಳಿಗೆ ಮೀರದಂತೆ)** 3x10=30

1. ಪಂಪ, ರನ್ನ, ಕುಮಾರವ್ಯಾಸ ಇವರಲ್ಲಿ ಇಬ್ಬರನ್ನು ಕುರಿತು ಟಿಪ್ಪಣಿ ಬರೆಯಿರಿ
2. ಇಂಗ್ಲಿಷ್ ಮಾಧ್ಯಮದ ಮೋಹ, ಮಾತೃ ಭಾಷಾ ಮಾಧ್ಯಮವು ಅಳಿವಿನಂಚಿಗೆ ಸರಿಯುವಂತೆ ಮಾಡುತ್ತಿದೆಯೇ? ವಿವರಿಸಿ.
3. ಸಿದ್ದಲಿಂಗಯ್ಯನವರ ಬಾಲ್ಯದ ದಿನಗಳನ್ನು ಕುರಿತು ಬರೆಯಿರಿ.
4. ಸರ್ವೋದಯ ಎಂದರೇನು? ವಿವರಿಸಿ.

**II. ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ)** 5x5=25

1. ರತ್ನನ ಕನ್ನಡಾಭಿಮಾನ ಎಂಥದ್ದು?
2. 'ನಾವು ಮತ್ತು ಮರಗಳು' ಕವಿತೆಯಲ್ಲಿ ವಿಸ್ಮಯ ಭಾವ ಮೂಡಿಬಂದಿರುವ ಬಗೆಯನ್ನು ವಿವರಿಸಿ.
3. ಮಗುವಿನ ಚೆಲುವನ್ನು ಜನಪದ ಕವಿ ಹೇಗೆ ವರ್ಣಿಸಿದ್ದಾರೆ?
4. ಚಂದ್ರಗಿರಿಯ ಪರಿಸರ ಹೇಗಿತ್ತು?
5. ತತ್ಸಮ ತದ್ಭವ ಎಂದರೇನು? ಉದಾಹರಣೆಯೊಂದಿಗೆ ಬರೆಯಿರಿ.
6. ಗಾಂಧೀಜಿ ಯಾವ ಪುಸ್ತಕವನ್ನು ಓದಿ ಪ್ರಭಾವಿತರಾದರು? ಏಕೆ?

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ.** 1x5=5

ಒಂದು ಕಾಡಿನ ನಿವಾಸಿಗಳಾಗಿದ್ದ ಕಪ್ಪೆಗಳಲ್ಲಿ ಕೆಲವು ಒಂದು ದಿನ ಆಹಾರ ಹುಡುಕಿಕೊಂಡು ಕುಪ್ಪಳಿಸುತ್ತ ಗುಂಪಾಗಿ ಹೋಗುತ್ತಿದ್ದವು. ಅವುಗಳಲ್ಲಿ ಎರಡು ಆಯ ತಪ್ಪಿ ದಾರಿಯಲ್ಲಿದ್ದ ಹಳ್ಳವೊಂದಕ್ಕೆ ಬಿದ್ದು ಬಿಟ್ಟವು. ಮಿಕ್ಕ ಕಪ್ಪೆಗಳು ಹಳ್ಳದ ಸುತ್ತ ಗುಂಪು ಕೂಡಿದವು. ಇಣುಕಿ ನೋಡಿದವು. ಹಳ್ಳವು ಆಳವಾಗಿತ್ತು. ಒಳಗೆ ಬಿದ್ದ ನತದೃಷ್ಟ ಕಪ್ಪೆಗಳನ್ನು ಕುರಿತು, "ಇಷ್ಟು ಆಳದ ಹಳ್ಳದಿಂದ ಹೇಗೆ ಮೇಲಕ್ಕೆ ಬರುತ್ತೀರಿ? ನಿಮ್ಮ ಕತೆ ಮುಗೀತು" ಎಂದು ಒಕ್ಕೊರಲಿನಿಂದ ವಟಗುಟ್ಟಿದವು. ಒಳಗೆ ಬಿದ್ದ ಕಪ್ಪೆಗಳು ಪ್ರಾಣ ಉಳಿಸಿಕೊಳ್ಳಲು ಜಿಗಿದಾಡಿದಂತೆಲ್ಲ, ಹಳ್ಳದ ಮೇಲೆ ಸುತ್ತುವರೆದು ಕುಳಿತಿದ್ದ ಕಪ್ಪೆಗಳು, "ನೀವು ಮೇಲೆ ಬರುವುದು ಸಾಧ್ಯವೇ ಇಲ್ಲ. ಸುಮ್ಮನೇ ಯಾಕೆ ಎಗರಾಡಿ ಮೈ ನೋಯಿಸಿಕೊಳ್ಳುತ್ತೀರಿ. ನೀವು ಸತ್ತಂತೆಯೇ ಸರಿ. ವ್ಯರ್ಥ ಪ್ರಯತ್ನ" ಎಂದು ಮತ್ತೆ ಮತ್ತೆ ವಟಗುಟ್ಟುತ್ತಲೇ ಇದ್ದವು.

ಹಳ್ಳದ ಮೇಲಿನಿಂದ ಕಪ್ಪೆಗಳು ಸಾಮೂಹಿಕವಾಗಿ ಪದೇ ಪದೇ ವಟಗುಟ್ಟುತ್ತ ಹಳ್ಳದೊಳಗಿನ ಕಪ್ಪೆಗಳ ಪ್ರಯತ್ನವನ್ನು ನಿರುತ್ಸಾಹಗೊಳಿಸುತ್ತಿದ್ದವು. ತಳದಲ್ಲಿ ಜಿಗಿದಾಡುತ್ತಿದ್ದ ಒಂದು ಕಪ್ಪೆಯು ತಾನು ಹೋರಾಡಿ ಪಾರಾಗಬಲ್ಲೆ ಎನ್ನುವ ಅಂತಃಸ್ಥೈರ್ಯವನ್ನೇ

ST. FRANCIS DE SALES COLLEGE · EXCELLENCE · EFFICIENCY · TRANSFORMATION · ELECTRONICS CITY

ಕಳೆದುಕೊಂಡಿತು. ಮೃತ್ಯುಕೂಪದಿಂದ ಹೊರ ಬರಲಾರೆ ಎನಿಸಿ ಎದೆ ಹಾರಿ ಅಸುನೀಗಿತು. ಇನ್ನೂ ಜೀವಂತವಾಗಿದ್ದ ಕಪ್ಪೆಯು ತನ್ನ ಪ್ರಯತ್ನವನ್ನು ಬಿಡದೆ ಮುಂದುವರಿಸುತ್ತಿತ್ತು. ಕಪ್ಪೆಗಳು ಮೇಲಿನಿಂದ "ನಿನ್ನ ಕತೆಯೂ ಅಷ್ಟೇ" ಎಂದು ನಿರಾಶಾವಾದದ ಬಲೆಯನ್ನು ನೇಯುತ್ತಿದ್ದವು. "ಜಿಗಿದಷ್ಟೂ ಮೈ ನೋಯಿಸಿಕೊಳ್ಳುತ್ತೀ, ಅಷ್ಟೇ. ನೋವುಂಡು ಸಾಯುವ ಬದಲು ನಿನ್ನ ಸ್ನೇಹಿತನಂತೆ ನೋವಿಲ್ಲದ ಸಾವನ್ನು ಒಪ್ಪಿಕೊಳ್ಳುವುದೇ ಮೇಲು" ಎಂದು ಅದೆಷ್ಟು ಸಲ ಹೇಳಿದವೋ! ಆದರೆ ಆ ಕಪ್ಪೆಯು ಮತ್ತಷ್ಟು ಶಕ್ತಿ ಕೂಡಿಸಿಕೊಂಡು ಪ್ರಯತ್ನವನ್ನು ಮುಂದುವರೆಸಿ ಹಳ್ಳದ ದಡ ಸೇರಿ ಬಚಾವಾಯಿತು.

ಮೇಲಕ್ಕೆ ಬಂದ ಕಪ್ಪೆಯನ್ನು ಮಿಕ್ಕ ಕಪ್ಪೆಗಳು ಸುತ್ತುವರೆದವು. ತಮ್ಮ ಮಾತುಗಳಿಗೆ ಲಕ್ಷ್ಯ ಕೊಡದೆ ಕೊನೆಗೂ ಸಾವಿನ ದವಡೆಯಿಂದ ಪಾರಾಗಿ ಬಂದ ಆ ಕಪ್ಪೆಯನ್ನು ಕುರಿತು, "ಎಷ್ಟು ಪ್ರಯತ್ನಿಸಿದರೂ ನೀನು ಬದುಕಲಾರೆ ಎಂದು ನಾವು ಹೇಳುತ್ತಿದ್ದೆವು. ನಿನಗೆ ಕೇಳಿಸುತ್ತಿರಲಿಲ್ಲವೇ?" ಎಂದು ಕೇಳಿದವು. ಆ ಕಪ್ಪೆಯು ನಿಟ್ಟುಸಿರು ಬಿಡುತ್ತಾ "ಎಲ್ಲರೂ ಸೇರಿ ಏನೋ ವಟಗುಟ್ಟುತ್ತಿದ್ದೀರಿ ಅನ್ನಿಸುತ್ತಿತ್ತು. ನನಗೆ ಕಿವಿ ಕೇಳಿಸುವುದಿಲ್ಲ. ಬಹುಶಃ ಪ್ರಯತ್ನವನ್ನು ಬಿಡದೆ ಮುಂದುವರಿಸುವಂತೆ ನನ್ನಲ್ಲಿ ಉತ್ಸಾಹ ತುಂಬುತ್ತಿದ್ದೀರಿ ಎಂದು ಕೊಂಡು ಪ್ರಯತ್ನವನ್ನು ಮುಂದುವರಿಸಿದೆ. ಧನ್ಯವಾದಗಳು" ಎಂದು ಹೇಳಿ ಮುಂದಕ್ಕೆ ಕುಪ್ಪಳಿಸಿತು. ಅವಾಕ್ಕಾದ ಮಿಕ್ಕ ಕಪ್ಪೆಗಳು ಅದನ್ನು ಹಿಂಬಾಲಿಸಿದವು.

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** 2x1=2

**V. ಇವುಗಳಲ್ಲಿ ಎರಡು ಪದಗಳಿಗೆ ಸ್ವಂತ ವಾಕ್ಯ ರಚಿಸಿ.** 2x2=4

1. ದಿಕ್ಸೂದೆಸೆ 2. ಮಾದರಿ 3. ಪರಿಶೀಲಿಸು 4. ಆದರ್ಶ

**VI. ವ್ಯಾಸಂಗ ಪ್ರಮಾಣ ಪತ್ರವನ್ನು ಕೋರಿ ನಿಮ್ಮ ಕಾಲೇಜಿನ ಪ್ರಾಂಶುಪಾಲರಿಗೆ ಒಂದು ಪತ್ರ ಬರೆಯಿರಿ.** 1x5=5

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** 4x1=4

1. ಸಿರಿ 2. ವೃಕ್ಷ 3. ಗಳು

4. ಯೆಡ್ತಿ 5. ಕಲಿಕೆ 6. ಸಮತೆ

**VIII. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** 5x1=5

1. ನಾವು ಯಾವುದರ ಕನಸು ಕಾಣುವವರು

ಅ) ಆಕಾಶ ಆ) ಯುದ್ಧ ಇ) ಭೂಮಿ ಈ) ನಿದ್ರೆ

2. ಸಾರಾ ಅಬೂಬಕ್ಕರ್ ಅವರ ನೆಚ್ಚಿನ ಪಾಠ ಯಾವುದಾಗಿತ್ತು?

ಅ) ಉರ್ದು ಆ) ಕನ್ನಡ ಇ) ಮಲಯಾಳಂ ಈ) ಗಣಿತ

3. ರತ್ನನ ಪದಗಳು ಕೃತಿಯ ಕರ್ತೃ

ಅ) ಜಿ.ಪಿ.ರಾಜರತ್ನಂ ಆ) ಶ್ರೀವಿಜಯ

ಇ) ಕುವೆಂಪು ಈ) ಕವಿರಾಜಮಾರ್ಗಕಾರ

4. ಸಿದ್ದಲಿಂಗಯ್ಯನವರ ಗುರುಗಳ ಹೆಸರೇನು?

ಅ) ನಾಗಪ್ಪಚಾರ್ ಆ) ಪ್ರಕೃತಿ

ಇ) ತುಂಬಾಡಿ ರಾಮಯ್ಯ. ಈ) ಗಾಂಧೀಜಿ

5. ಐನೋರ ಹೊಲ ಕಥೆಯನ್ನು ಬರೆದವರು ಯಾರು?

ಅ) ಡಾ. ಡಿ.ಎನ್. ಯೋಗೀಶ್ವರಪ್ಪ. ಆ) ಡಾ. ಸಿದ್ದಲಿಂಗಯ್ಯ

ಇ) ಡಾ. ವಿ. ಮುನಿವೆಂಕಟಪ್ಪ ಈ) ಡಾ. ಎಚ್. ಎಸ್. ಗೋಪಾಲರಾವ್

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY